



# ಪವಿತ್ರ ಪತ್ರಮಾಲೆ

## ಸ್ವಾಮಿ ತುರೀಯಾನಂದಜಿ ಅವರ ಒಂದು ಪತ್ರ

ವಾರಾಣಸಿ
೧೬, ಜನವರಿ, ೧೯೨೦



**ಪ್ರೀತಿಯ ರಮೇಶ್,**

ಜನವರಿ ೧೨ ರಂದು ನೀನು ಬರೆದ ಪತ್ರ ನೆನ್ನೆ ನನಗೆ ತಲುಪಿತು. ಈ ಪತ್ರವನ್ನು ನೀನು ಸ್ವಾಮಿ ಶಾರದಾನಂದರಿಗೇ ಬರೆದಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ಏಕೆಂದರೆ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ಗ್ರಂಥವನ್ನು ರಚಿಸಿರುವುದು ಅವರು. ಆ ಪುಸ್ತಕದ ಬಗೆಗಿನ ನಿನ್ನ ಪ್ರಶ್ನೆಗೆ ಅವರೇ ಸ್ಪಷ್ಟವಾಗಿ ಉತ್ತರಿಸುತ್ತಿದ್ದರು. ಆದರೂ ನಿನ್ನ ಪ್ರಶ್ನೆಯಲ್ಲಿ ನೀನು ಎತ್ತಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನನಗೆ ಗೊತ್ತಿದ್ದಷ್ಟು ಉತ್ತರಿಸಲು ಪ್ರಯತ್ನಪಡುತ್ತೇನೆ.

ತಮಗೆ ಮುಕ್ತಿಯೇ ಇಲ್ಲವೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಇದನ್ನು ಅವರ ಬಾಯಿಯಿಂದಲೇ ನಾನು ಕೇಳಿದ್ದೇನೆ. ಇಲ್ಲಿ ಮುಕ್ತಿ ಎಂದರೆ ನಿರ್ವಾಣ ಮುಕ್ತಿ – ಅಂದರೆ, ಮೋಕ್ಷವಾದ ಮೇಲೆ ಈ ಜಗತ್ತಿನಲ್ಲಿ ಮತ್ತೆ ಹುಟ್ಟದೆ ಇರುವುದು. ಈ ಜಗತ್ತಿನ ದುಃಖಗಳಿಂದ ತುಂಬ ಬಾಧಿಸಲ್ಪಟ್ಟಿರುವ ಜೀವಕೋಟಿಗಳು ಮತ್ತೆ ಹುಟ್ಟುವುದಕ್ಕೆ ಇಷ್ಟಪಡುವುದಿಲ್ಲ. ಅವರು ಈ ಸಂಕಷ್ಟಗಳಿಂದ ಎಂದೆಂದೂ ಪಾರಾಗಲು ಇಚ್ಛಿಸುತ್ತಾರೆ. ಆದ್ದರಿಂದಲೇ ಅವರು ನಿರ್ವಾಣಕ್ಕಾಗಿ ಪ್ರಯತ್ನಪಡುತ್ತಾರೆ. ನಿರ್ವಾಣದ ಅರ್ಥ ಇದು: **ನಿರ್** = ಇಲ್ಲವಾಗುವುದು. **ವಾಣ** = ದೇಹ. **ನಿರ್ವಾಣ** = ಮುಕ್ತಿ. ಇದರರ್ಥ, ಅಂಥ ಸ್ಥಿತಿಯನ್ನು ಪಡೆದ ವ್ಯಕ್ತಿ ಮತ್ತೆ ದೇಹಧಾರಣೆ ಮಾಡಲು ಇಚ್ಛೆಪಡುವುದಿಲ್ಲ.

ಯಾವ ಮಹಾಪುರುಷನಾದವನು, ಲೋಕಕಲ್ಯಾಣವನ್ನು ಮಾಡುವ ಅನುಕಂಪದಿಂದ ಪ್ರೇರಿತನಾಗಿ ಮತ್ತೆ ಮತ್ತೆ ಈ ಜಗತ್ತಿನಲ್ಲಿ ಹುಟ್ಟಿಬರುತ್ತಾನೆಯೋ, ಅಂತಹವನಿಗೆ ಆತ್ಯಂತಿಕ ನಿರ್ವಾಣವೆಂಬುದು ಹೇಗೆ ತಾನೆ ದೊರಕಲು ಸಾಧ್ಯ? ಅದಕ್ಕೆಂದೇ ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರಿಗೆ ಹೀಗೆ ಹೇಳಿದರು: "ಯಾರು ರಾಮನೋ, ಯಾರು ಕೃಷ್ಣನೋ ಅವನೇ ಈ ದೇಹದಲ್ಲಿ ರಾಮಕೃಷ್ಣನಾಗಿದ್ದಾನೆ. ಆದರೆ ನಿನ್ನ ವೇದಾಂತ ದೃಷ್ಟಿಯಿಂದಲ್ಲ" ಎಂದು. ಇಲ್ಲಿ ಒತ್ತಿಹೇಳಿರುವ ಅಂಶವೆಂದರೆ, ಅದ್ವೈತ ವೇದಾಂತವು ಜೀವ ಮತ್ತು ಬ್ರಹ್ಮ – ಇವೆರಡೂ ಒಂದೇ ಎನ್ನುವುದನ್ನು ಪ್ರತಿಪಾದಿಸುತ್ತದೆ. ಇದನ್ನು ನೋಡಿಕೊಂಡು ಕೆಲವರು, ಎಲ್ಲರೂ ರಾಮ ಮತ್ತು ಕೃಷ್ಣನಿಗೆ ಸಮಾನ ಎಂದು ಅಪಾರ್ಥಮಾಡುತ್ತಾರೆ. ಹಾಗೆಯೇ ರಾಮ ಮತ್ತು ಕೃಷ್ಣರಿಗೆ ವಿಶೇಷವಾದ ಗುಣಗಳೇನೂ ಇಲ್ಲ ಎಂದು ವಾದಿಸುತ್ತಾರೆ. ಈ ರೀತಿ ಸ್ವಾಮೀಜಿ ತಿಳಿದುಕೊಳ್ಳಬಾರದೆಂದೇ ಶ್ರೀರಾಮಕೃಷ್ಣರು, "ಯಾರು ರಾಮನೋ, ಯಾರು ಕೃಷ್ಣನೋ ಅವನೇ ಈ ದೇಹದಲ್ಲಿ ರಾಮಕೃಷ್ಣನಾಗಿದ್ದಾನೆ" ಎಂಬ ತಮ್ಮ ಹೇಳಿಕೆಗೆ, "ನಿನ್ನ ವೇದಾಂತದ ದೃಷ್ಟಿಯಿಂದಲ್ಲ" ಎಂಬ ಒಂದು ವಿಶೇಷಣವನ್ನು ಸೇರಿಸಿದ್ದಾರೆ.

**ಇದರರ್ಥ, ಶ್ರೀರಾಮಕೃಷ್ಣರ ಚೈತನ್ಯವೆಂಬುದು, ಈಶ್ವರ ಚೈತನ್ಯವಾಗಿದೆಯೇ ಹೊರತು, ಜೀವಚೈತನ್ಯವಲ್ಲ ಎಂದು.** ಅದ್ವೈತ ವೇದಾಂತದ ಪ್ರಕಾರ, ಜೀವಿಗಳು ಆಧ್ಯಾತ್ಮಿಕ ಸಾಧನೆ ಮಾಡಿ, ಕಡೆಗೆ ಸಮಾಧಿಯಲ್ಲಿ ಅವಿದ್ಯೆಯನ್ನು ಹೋಗಲಾಡಿಸಿಕೊಳ್ಳುವುದರ ಮೂಲಕ, ಬ್ರಹ್ಮಭಾವದಲ್ಲಿ ತಾದಾತ್ಮ್ಯತೆಯನ್ನು ಪಡೆಯುತ್ತಾರೆ. ಆದರೂ, ಯಾವ ಬಗೆಯ ಊಹೆಯ ಪ್ರಯತ್ನಗಳಿಂದಲೂ ಜೀವಿಯು ಎಂದಿಗೂ ಈಶ್ವರನಾಗಲಾರನು. ಯಾರು ಈಶ್ವರನಾಗಿರುವನೋ, ಅವನು ಯಾವತ್ತೂ ಈಶ್ವರನಾಗಿಯೇ ಇರುವನು. ಅವನು ಮಾನವ ದೇಹಧಾರಣೆ ಮಾಡಿ, ಜೀವಿಯಂತೆ ಕಂಡುಬಂದರೂ, ಅದೇ ಈಶ್ವರನಾಗಿಯೇ ಉಳಿಯುವನೇ ಹೊರತು, ಎಂದೆಂದಿಗೂ ಜೀವಿಯಾಗಲಾರನು.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾನೆ: "ನನಗೆ ಬಹಳ ಜನ್ಮಗಳು ಆಗಿಹೋದವು. ನಿನಗೂ ಕೂಡ. ಅವೆಲ್ಲವನ್ನೂ ನಾನು ಅಚ್ಚಳಿಯದ ಜ್ಞಾನದ ಬಲವುಳ್ಳವನಾದ್ದರಿಂದ ತಿಳಿದಿರುವೆನು. ನೀನಾದರೋ ಅಜ್ಞಾನದಿಂದ ಮುಸುಕಲ್ಪಟ್ಟಿರುವುದರಿಂದ ತಿಳಿದಿಲ್ಲ. ನಾನು ಹುಟ್ಟಿಲ್ಲದವನೂ, ಅವ್ಯಯ ಸ್ವಭಾವದವನೂ, ಜೀವಿಗಳ ಒಡೆಯನೂ ಆಗಿದ್ದರೂ ನನ್ನ ಪ್ರಕೃತಿಯನ್ನು ಆಶ್ರಯಿಸಿ, ನನ್ನ ಮಾಯೆಯ ಮೂಲಕ ಅವತರಿಸುತ್ತೇನೆ." (ಭಗವದ್ಗೀತೆ, ೪: ೫–೬). ಇದೇ ರೀತಿ ಶ್ರೀರಾಮಕೃಷ್ಣರೂ ಹೇಳಿದ್ದಾರೆ: "ನಿನ್ನ ವೇದಾಂತದ ದೃಷ್ಟಿಕೋನದ ಪ್ರಕಾರವಲ್ಲ" ಎಂದು. ಯಾವುದನ್ನು ಕೃಷ್ಣ ವಿವರಿಸಿ ಹೇಳಿದ್ದಾನೋ ಅದನ್ನೇ ಶ್ರೀರಾಮಕೃಷ್ಣರೂ ಇಲ್ಲಿ ಹೇಳಿದ್ದಾರೆ.

ನಿನ್ನ ಶ್ರೇಯೋಭಿಲಾಷಿ

**ತುರೀಯಾನಂದ**



# ಶ್ರೀರಾಮಕೃಷ್ಣರ ದೂರದೃಷ್ಟಿ

ಸ್ವಾಮಿ ಸುನಿರ್ಮಲಾನಂದ

**ಶ್ರೀ**ರಾಮಕೃಷ್ಣರ ನಿರಾಡಂಬರ ಜೀವನದಲ್ಲಿ 'ಪವಾಡ'ಗಳು ಇರಲೇ ಇಲ್ಲ ಎಂದು ಹೇಳಬಹುದು. ಏಕೆಂದರೆ ಅವರಿಗೆ ಪವಾಡಗಳ ಬಂಡವಾಳ ಬಹಳ ಚೆನ್ನಾಗಿ ತಿಳಿದಿತ್ತು. ತಮ್ಮ ಶಿಷ್ಯರೆಲ್ಲರಿಗೂ ಸಿದ್ಧಿಗಳು, ಪವಾಡಗಳು, ಅತಿಮಾನವೀಯ ಶಕ್ತಿಗಳು – ಇವುಗಳ ಬಗ್ಗೆ ಸದಾ ಜಾಗರೂಕರಾಗಿರುವಂತೆ ಅವರು ಹೇಳುತ್ತಿದ್ದರು. ಹೆಚ್ಚೇನು, ಪವಾಡಗಳು ಎಂದರೆ ವಿಷದ ಹಾಗೆ ಎಂದು ಅವರು ಎಚ್ಚರಿಸುತ್ತಿದ್ದರು. ಧರ್ಮ ಮತ್ತು ಆಧ್ಯಾತ್ಮಿಕತೆ ಎಂದರೆ 'ಭಗವಂತನನ್ನು ಪ್ರೀತಿಸುವುದು', 'ಭಗವಂತನನ್ನು ಕಾಣಲು ವ್ಯಾಕುಲರಾಗುವುದು', ಮತ್ತು ' 'ನಾನು ಯಾರು' ಎಂದು ತಿಳಿಯಲು ಹಾತೊರೆಯುವುದು' ಎಂದು ಅವರು ಸಾರಿ ಸಾರಿ ಹೇಳುತ್ತಿದ್ದರು.

ಶ್ರೀರಾಮಕೃಷ್ಣರಿಗೆ ಪವಾಡಗಳನ್ನು ತೋರಿಸಿ ಜನರನ್ನು ನಿಬ್ಬೆರಗು ಮಾಡುವ ಆಲೋಚನೆ ಎಂದಿಗೂ ಇರಲಿಲ್ಲ. ಅವರು ಅವತಾರವರಿಷ್ಠರು. ಅವರು ಕೀರ್ತಿ–ಹೆಸರುಗಳನ್ನು ಹಿಂಬಾಲಿಸಿ ಹೋಗಬೇಕಿರಲಿಲ್ಲ. ಅವರ ಜೀವನವೇ ಅದ್ಭುತ, ಅವರ ವಾಣಿ ಅದ್ಭುತ, ಅವರ ಪ್ರತಿಯೊಂದು ನಡೆನುಡಿಯೂ ಅದ್ಭುತ. ಶ್ರೀರಾಮಕೃಷ್ಣರು ಸಹಜವಾಗಿ, ಸರಳವಾಗಿ ನುಡಿದ ಕೆಲವು ನುಡಿಗಳು ಹೇಗೆ ಮುಂದೆ ನಿಜವಾಗಿ ಪರಿಣಮಿಸಿದವು, ಅವರ ಸರಳ ನುಡಿಗಳು ಹೇಗೆ ಭವಿಷ್ಯವಾಣಿಗಳಾದವು ಎಂದು ತಿಳಿಯಲು ಒಂದೆರಡು ಉದಾಹರಣೆಗಳನ್ನು ನೀಡಬಹುದು. ಒಂದು ಮಾತು. ಇಲ್ಲಿ ಎಲ್ಲರಿಗೂ ಗೊತ್ತಾಗಬಲ್ಲ, ಸರ್ವವಿದಿತವಾದ ಭವಿಷ್ಯವಾಣಿಗಳನ್ನೇ ಆರಿಸಿಕೊಳ್ಳಲಾಗಿದೆ.

**೧. ಶ್ರೀಶಾರದಾದೇವಿಯವರಿಗೆ ಆದೇಶ :** ತಮ್ಮ ಧರ್ಮಪತ್ನಿ ಶ್ರೀಶಾರದಾದೇವಿಯವರಿಗೆ ಶ್ರೀರಾಮಕೃಷ್ಣರ ಆದೇಶ ಹೀಗಿತ್ತು: "ಜಗತ್ತಿನ ಜನರು ಹುಳುಗಳಂತೆ ಪರಿತಪಿಸುತ್ತಿದ್ದಾರೆ. ಅವರನ್ನು ನೋಡಿಕೊ." ಶ್ರೀಶಾರದಾದೇವಿಯವರು ಇದ್ದ ಕಾಲದ ಸಮಾಜ ಅಜ್ಞಾನದಿಂದ ಕೂಡಿತ್ತು; ನಾರಿಯರ ಶೋಷಣೆ ಅವ್ಯಾಹತವಾಗಿ ನಡೆಯುತ್ತಿತ್ತು; ಸಂಪ್ರದಾಯಬದ್ಧವಾಗಿತ್ತು. ಶ್ರೀಮಾತೆಯವರು ಭಗವತಿಯ ಸ್ವರೂಪವೇ ಸರಿ. ಆದರೆ ಅವರೂ ಸುತ್ತಲಿನ ಪರಿಸ್ಥಿತಿಯನ್ನು ಕಂಡು ದುಃಖಿಸುತ್ತಿದ್ದರು; ತನ್ನಂತಹ ಸ್ತ್ರೀಯಿಂದ ಏನು ತಾನೇ ಸಾಧ್ಯ ಎಂಬ ಸಂದೇಹವನ್ನು ವ್ಯಕ್ತಪಡಿಸಿದರು. ಅದಕ್ಕೆ ಶ್ರೀರಾಮಕೃಷ್ಣರು ಹೀಗೆ ಉತ್ತರಿಸುತ್ತಾರೆ: "ನೀನು ಖಂಡಿತವಾಗಿಯೂ ಜಗತ್ತಿನ ಪರಿಪಾಲನೆಯನ್ನು ಮಾಡಲಿರುವೆ" ಎಂದು. ಇದಾಗಿ ಕೇವಲ ನೂರು ವರ್ಷಗಳಲ್ಲಿ ಶ್ರೀಮಾತೆಯ ಕೃಪೆಯ ಪರಿಣಾಮ ಬಹಳವಾಗಿ ಹಬ್ಬಿರುವುದನ್ನು ನಾವೀಗಾಗಲೇ ಕಂಡಿದ್ದೇವೆ. ಇನ್ನು ಬರುವ ಶತಮಾನಗಳಲ್ಲಿ ಅವರ ಶಕ್ತಿಯ ಪ್ರಕಾಶವು ಇನ್ನೂ ಹೆಚ್ಚಾಗಿ ಗೋಚರಿಸಲಿದೆ.

**೨. ನರೇಂದ್ರ ಲೋಕಶಿಕ್ಷಕನಾಗಲಿದ್ದಾನೆ:** ನರೇಂದ್ರ ಆಗಿನ್ನೂ ಒಬ್ಬ ಕಾಲೇಜು ವಿದ್ಯಾರ್ಥಿ. ತಂದೆಯ ಮೃತ್ಯುವಿನ ಪರಿಣಾಮವಾಗಿ ಮತ್ತು ನೆಂಟರುಗಳ ವಂಚನೆಯಿಂದಾಗಿ ಬಡತನದಲ್ಲಿ ಮುಳುಗಿದ್ದ ಯುವಕ. ಅಂತಹ ಯುವಕನನ್ನು ಕುರಿತು ಶ್ರೀರಾಮಕೃಷ್ಣರು ಒಂದು ಲಿಖಿತ ಭವಿಷ್ಯವಾಣಿಯನ್ನು ನೀಡಿದ್ದಾರೆ. ಈ ಬರಹವನ್ನು ಎಲ್ಲರೂ ಇಂದಿಗೂ, ಎಂದೆಂದಿಗೂ ಪರೀಕ್ಷಿಸಿ ನೋಡಬಹುದು. "ಹಾಗೆ ಹೇಳಿದ್ದರೋ ಇಲ್ಲವೋ, ಯಾರಿಗೆ ಗೊತ್ತು?" ಎಂಬ ಸಂಶಯಕ್ಕೆ ಎಡೆಯೇ ಇಲ್ಲ.

ಶ್ರೀರಾಮಕೃಷ್ಣರು ಯಾವುದೇ ವ್ಯಕ್ತಿಯ ಅಂತರಾಳವನ್ನು ಬಗೆದು ನೋಡುವ ಶಕ್ತಿಯುಳ್ಳವರಾಗಿದ್ದರು. ಹಾಗೆಯೇ ಆ ವ್ಯಕ್ತಿಯ ಭವಿಷ್ಯದ ಬಗ್ಗೆ ಖಚಿತವಾಗಿ ಹೇಳಬಲ್ಲವರೂ ಆಗಿದ್ದರು. ಅಂತಹ ಅಪೂರ್ವಶಕ್ತಿಯ ಕೆಲವು ನಿದರ್ಶನಗಳನ್ನು ನಮ್ಮ ಮುಂದೆ ಇಟ್ಟಿರುವ ಪೂಜ್ಯ ಸ್ವಾಮೀಜಿಯವರು ಸ್ವಿಟ್ಜರ್‌ಲ್ಯಾಂಡ್ ದೇಶದ ಜಿನೀವಾ ನಗರದಲ್ಲಿರುವ ರಾಮಕೃಷ್ಣ ಮಹಾಸಂಘದ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಇಂಗ್ಲಿಷ್, ಕನ್ನಡ ಮತ್ತು ಬಂಗಾಳಿ ಭಾಷೆಗಳಲ್ಲಿ ನಿಷ್ಣಾತರು. ಹಲವಾರು ಗ್ರಂಥಗಳನ್ನು ರಚಿಸಿರುವ ಸ್ವಾಮೀಜಿಯವರು, ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರೂ ಆಗಿದ್ದರು.